# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1385 (1593) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19 /12/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಅಸಂಘಟಿತ ಕಾರ್ಮಿಕರ ವಲಯದಲ್ಲಿ ಇರುವ ಚಿನ್ನ-ಬೆಳ್ಳಿ ಕುಲಕಸುಬುದಾರರಿಗೆ ಏನೇನು ಸೌಲಭ್ಯ ನೀಡಲಾಗುತ್ತಿದೆ: ರಾಜ್ಯದ್ಯಂತ ಸುಮಾರು 1.00 ಲಕ್ಷ ಕುಟುಂಬಗಳು ಈ ರೀತಿಯ ವೃತ್ತಿಯನ್ನು ಮಾಡಿಕೊಂಡಿರುವುದನ್ನು ಸರ್ಕಾರವು ಗುರುತಿಸಿದೆಯೇ; | ರಾಜ್ಯ ಸರ್ಕಾರವು ಅಸಂಘಟಿತ ವಲಯದಲ್ಲಿ ಬರುವ ಚಿನ್ನ-ಬೆಳ್ಳಿ ಕುಲಕಸುಬುದಾರರನ್ನು ಗುರುತಿಸಿರುತ್ತದೆ.<br><br>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಚಿನ್ನ-ಬೆಳ್ಳಿ ಕುಲಕಸುಬುದಾರರನ್ನು **"ಅಕ್ಕಸಾಲಿಗರು"** ಎಂಬ ವರ್ಗದಡಿ ಗುರುತಿಸಿ ನೋಂದಾಯಿಸಲಾಗುತ್ತಿದ್ದು, ಈಗಾಗಲೇ 15,933 ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ಅನ್ನು ನೀಡಲಾಗಿರುತ್ತದೆ. ಇನ್ನುಳಿದ ಕಾರ್ಮಿಕರನ್ನೂ ಸಹ ಸದರಿ ಯೋಜನೆಯಡಿ ನೋಂದಾಯಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಈ ಯೋಜನೆಯಡಿ ಚಿನ್ನ-ಬೆಳ್ಳಿ ಕುಲಕಸುಬುದಾರರು (**ಅಕ್ಕಸಾಲಿಗರು**) ಸೇರಿದಂತೆ ಒಟ್ಟು 101 ಅಸಂಘಟಿತ ಕಾರ್ಮಿಕರುನ್ನು ನೋಂದಾಯಿಸುತ್ತಿದ್ದು, ಈ ಕೆಳಕಂಡ ಸೌಲಭ್ಯಗಳು ನೀಡಲಾಗುತ್ತಿದೆ.<br><br>**ಸೌಲಭ್ಯಗಳು:**<br>**ಅ) ಅಪಘಾತ ಪರಿಹಾರ ಸೌಲಭ್ಯ:**<br>• ಅಪಘಾತದಿಂದ ಮರಣ ಹೊಂದಿದಲ್ಲಿ ಅವರ ನಾಮನಿರ್ದೇಶಿತರಿಗೆ ರೂ.1 ಲಕ್ಷ ಪರಿಹಾರ.<br>• ಅಪಘಾತದಿಂದ ಶಾಶ್ವತ/ ಭಾಗಶಃ ದುರ್ಬಲತೆ ಹೊಂದಿದಲ್ಲಿ ರೂ.1.00 ಲಕ್ಷಗಳವರೆಗೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ). |
| ಆ) | ಅಸಂಘಟಿತ ಕಾರ್ಮಿಕರ ವಲಯದಲ್ಲಿ ಬರುವ ಇವರುಗಳಿಗೆ ಕಾರ್ಮಿಕ ಇಲಾಖೆಯಿಂದ ನೀಡುವ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಏನು ಕ್ರಮ ವಹಿಸಿದೆ; | |

| | | |
|---|---|---|
| | | • ಆಸ್ಪತ್ರೆ ವೆಚ್ಚ ಮರುಪಾವತಿ ರೂ.50,000/-ಗಳವರೆಗೆ. (ಅಪಘಾತ ಪ್ರಕರಣಗಳಲ್ಲಿ ಮಾತ್ರ)<br><br>**ಆ) ಸಹಜ ಮರಣ ಪರಿಹಾರ ಮತ್ತು ಅಂತ್ಯಕ್ರಿಯೆ ವೆಚ್ಚ:** - ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ.10,000/-ಗಳ ಧನ ಸಹಾಯ. |
| ಇ) | ಕುಲಕಸುಬನ್ನು ಬೆಳಸುವ ಸಲುವಾಗಿ ಸದರಿ ಕುಲ ಕಸಬುದಾರರಿಗೆ ಬಡ್ಡಿರಹಿತ ಸಾಲ ಅಥವಾ ಸಬ್ಸಿಡಿ ಸಾಲ ಸೌಲಭ್ಯವನ್ನು ಒದಗಿಸುವ ಬಗ್ಗೆ ಸರ್ಕಾರ ಕ್ರಮ ವಹಿಸುವುದೇ: ಇವರುಗಳಿಗೆ ಆರೋಗ್ಯ ವಿಮೆ ಮತ್ತು ಮಕ್ಕಳ ವೃತ್ತಿಪರ ಶಿಕ್ಷಣಕ್ಕೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಬಗ್ಗೆ ಸರ್ಕಾರದ ನಿಲುವೇನು; | ಚಿನ್ನ-ಬೆಳ್ಳಿ ಕುಲಕಸುಬುದಾರರಿಗೆ ಬಡ್ಡಿ ರಹಿತ ಸಾಲ, ಅಥವಾ ಸಬ್ಸಿಡಿ, ಆರೋಗ್ಯ ವಿಮೆ, ಮತ್ತು ಮಕ್ಕಳ ವೃತ್ತಿಪರ ಶಿಕ್ಷಣಕ್ಕೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಹಾಗೂ ಕಟ್ಟಡ ಕಾರ್ಮಿಕರಿಗೆ ನೀಡುವ ಸವಲತ್ತುಗಳನ್ನು ಸದರಿ ಕಾರ್ಮಿಕರಿಗೆ ನೀಡುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಮಂಡಳಿಯಲ್ಲಿ ಇರುವುದಿಲ್ಲ. |
| ಈ) | ಕಟ್ಟಡ ಕಾರ್ಮಿಕರಿಗೆ ನೀಡುವ ಸೌಲಭ್ಯ ಹಾಗೂ ಇತರ ಕಾರ್ಮಿಕರಿಗೆ ನೀಡುವ ಸವಲತ್ತುಗಳನ್ನು ಈ ಕುಲಕಸುಬನ್ನು ನಿರ್ವಹಿಸುವ ಕಾರ್ಮಿಕರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳಬಹುದಲ್ಲವೇ? | |

**ಕಾಇ 511 ಎಲ್ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**